# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s Mysore Mercantile Company Limited ಕಂಪನಿಯವರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳ ಬಸಾಪುರ, ಬೆಂಚಮರಡಿ ಮತ್ತು ತುಪ್ಪದೂರು ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 20.8 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಇಎನ್ 644 ಎನ್‌ಸಿಇ 2018, ದಿನಾಂಕ:03.08.2021
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರ ಪತ್ರ ಸಂಖ್ಯೆ: KREDL/08/MMCL – 10 to 20.8 MW(MLL-10.8+RSPPL-10 to 27/ F-1770/3372, ದಿನಾಂಕ:07.12.2021.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದನ್ವಯ M/s Mysore Mercantile Company Limited ಕಂಪನಿಯವರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳ ಬಸಾಪುರ, ಬೆಂಚಮರಡಿ ಮತ್ತು ತುಪ್ಪದೂರು ಗ್ರಾಮಗಳಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು, ಸದರಿ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ವರ್ಗದಡಿಯಲ್ಲಿ ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರು M/s Mysore Mercantile Company Limited ಕಂಪನಿಯವರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 20.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಅಭಿವೃದ್ಧಿದಾರರು ಕೋರಿದ್ದು, ಈ ಸಂಬಂಧ ಅರ್ಜಿ ಮತ್ತು ಡಿಪಿಆರ್ ಶುಲ್ಕವನ್ನು ಪಾವತಿಸಿರುವುದಾಗಿ ಹಾಗೂ ಸದರಿ ಕಂಪನಿಯು ನಿಗದಿತ ನೆಟ್‌ವರ್ತ್ ಹೊಂದಿರುವುದಾಗಿ ತಿಳಿಸಿರುತ್ತಾರೆ.

ಆದುದರಿಂದ, M/s Mysore Mercantile Company Limited ಕಂಪನಿಯವರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 20.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ ಮತ್ತು ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡಲು ಅನುಮತಿಸಿ, ಸದರಿ ಕಂಪನಿಯವರಿಗೆ ಟೋಪೊಶೀಟ್ ಸಂಖ್ಯೆ:56 D/12 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ 4 ಸಂಖ್ಯೆಯ 2.7 ಮೆ.ವ್ಯಾ. ಸಾಮರ್ಥ್ಯದ ಮತ್ತು 10 ಸಂಖ್ಯೆಯ 1 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್ ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ, ಒಟ್ಟು 56 ಎಕರೆ (14 WTGs x 4 Acres= 56 acres) ಜಮೀನನ್ನು ಉಪಯೋಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

....2

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 317ಎನ್‌ಸಿಇ 2021**
**ಬೆಂಗಳೂರು ದಿನಾಂಕ:04.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Mysore Mercantile Company Limited ಕಂಪನಿಯವರಿಗೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಮಾನ್ವಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 10 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 20.8 ಮೆ.ವ್ಯಾ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತುಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Geographical area description for 20.8 MW capacity wind power project of M/s Mysore Mercantile Company Limited**

| Sl. No. | Geographical area description of the project | Near by villages of the proposed area & district | Existing capacity in MW | Capacity enhancement in MW | Total capacity in MW |
|---|---|---|---|---|---|
| 1 | The proposed area is surrounded by the points A, B, C, D, E and are held in the following Geographical co-ordinates as;<br><br>Point A:Lat: 16º2'26.68"N, Long:76º33'58.91"E<br><br>Point B:Lat: 16º3'9.54"N, Long:76º34'7.3"E<br><br>Point C:Lat: 16º6'9.22"N, Long:76º39'29.4"E<br><br>Point D:Lat: 16º6'9.22"N, Long:76º39'42.96"E<br><br>Point E:Lat: 16º2'28.3"N, Long:76º39'41.27"E<br><br>**Peaks:**509, 497, 515, 576, 552, 513, 505 & 480 m AMSL<br><br>**Toposheet No.**:56 D/12 | Basapur, Benchamardi & Tuppadur villages of Lingasugur & Manvi taluks, Raichur district | 10 MW | 10.8 MW | 20.8 MW<br><br>(4 Nos X 2700 Kw + 10 Nos X 1000 Kw) |

....3

**ಷರತ್ತುಗಳು**

1. M/s Mysore Mercantile Company Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ:ಇಎನ್ 435 ಎನ್.ಸಿ.ಇ 2011, ದಿನಾಂಕ:06.01.2012ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2. M/s Mysore Mercantile Company Limited ರವರು ಯೋಜನೆಯ ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ನಿಗದಿಪಡಿಸಿರುವ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.

3. M/s Mysore Mercantile Company Limited ಕಂಪನಿಯು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಕುರಿತು ಕೆಪಿಟಿಸಿಎಲ್/ಸಂಬಂಧಿಸಿದ ಎಸ್ಕಾಂಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

4. M/s Mysore Mercantile Company Limited ಕಂಪನಿಯವರಿಗೆ ಮಂಜೂರಾಗಿರುವ 20.8 ಮೆ.ವ್ಯಾ. ಸಾಮರ್ಥ್ಯವನ್ನು 4 ಸಂಖ್ಯೆಯ 2.7 ಮೆ.ವ್ಯಾ. ಸಾಮರ್ಥ್ಯದ ಮತ್ತು 10 ಸಂಖ್ಯೆಯ 1 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್ ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ ಒಟ್ಟು 56 ಎಕರೆ (14 WTGs x 4 Acres=56 acres) ಜಮೀನನ್ನು ಉಪಯೋಗಿಸತಕ್ಕದ್ದು.

5. ಅಭಿವೃದ್ಧಿದಾರರು ತಮ್ಮ ಕಂಪನಿಗೆ ಮಂಜೂರಾಗಿರುವ ಯೋಜನೆಯನ್ನು MNRE ರವರ ಮಾರ್ಗಸೂಚಿಯಂತೆ, (Micro Siting Guidelines) ಅಳವಡಿಸಿಕೊಂಡು, ಪವನ ವಿದ್ಯುತ್ ಘಟಕಗಳ ಅಂತರವನ್ನು ನಿಗದಿಗೊಳಿಸಿ ಅನುಷ್ಠಾನಗೊಳಿಸತಕ್ಕದ್ದು.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ:ಇಎನ್ 644 ಎನ್‌ಸಿಇ 2018, ದಿನಾಂಕ:03.08.2021ರಲ್ಲಿನ ಷರತ್ತುಗಳು ಯಥಾವತ್ತಾಗಿ ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

N. mangalagowri 4/1/22
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

**ಇವರಿಗೆ:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.

...4